ಬಾಧ್ಯತೆ ಇರತಕ್ಕವರು ಈ ಇಸ್ತಿಹಾರ್ ತಾರೀಖು ಲಾಗಾಯತು 6 ತಿಂಗಳ ವಳಗಾಗಿ ಬೆಂಗಳೂರಲ್ಲಿರುವ ನಮ್ಮ ಆಫೀಸ್ ರೂಬರೂ ಖುದ್ದಾಗಲಿ ಅಥವಾ ವಿಜಂಟರ ಮೂಲಕವಾಗಲಿ ಹಾಜರಾಗಿ ತಮ್ಮ ಪಕ್ಕುದಾರಿಯನ್ನ ಸ್ಥಿರಪಡಿಸಿಕೊಳ್ಳತಕ್ಕದ್ದಾಗಿರುತ್ತೆ.

ಬತಾರೀಖು 12ನೇ ನವಂಬರ್ 1885ನೇ ಇಸವಿ ಬರಜಾಗಾ ಬೆಂಗಳೂರು.

ಎ. ಹೆಚ್. ಮೆಕ್ಕ್ಕಟ್ಯೈರ್,
ಡೆಪ್ಯೂಟಿ ಕಮ್ಮಿಷನರ್.

ಬೆಂಗಳೂರು ಸಬ್‌ಜಡ್ಜ್ರೀಯವರ ಕೋರ್ಟ್‌ನಲ್ಲಿ.

1885ನೇ ಇಸವಿ ಮಿಸಲೇನಿಯಸ್ ನಂಬರ್ 418.

ಮೃತಪಟ್ಟ ಬಲಗೈ ದೊಮ್ಮಲೂರು ಮುನಿಶಾನಿವಿ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಬೆಂಗಳೂರು ತಾಲ್ಲೂಕು ವರ್ತೂರು ಹೋಬಳಿ ದೇವರಬಿಸನಹಳ್ಳಿಯಲ್ಲಿ ಯಿರುವ ಛಾತೀಯಾದವನ ದತ್ತು ಮಗ ನಕ್ಕರಿಗ ಮೈನರ್ ಗಾರ್ಡಿಯರ್ ಬಲಗೈ ನಾವನು, ಸದರೀ ಮೃತಪಟ್ಟ ಮುನಿಶಾಮಿಗೆ (ಮೈನರ್ ನಕ್ಕರಿಗನು) ದತ್ತು ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಸದರೀ ವಾಸಸ್ಥನಾಗಿ ಮೃತಪಟ್ಟ ಮುನಿಶಾಮಿ ಜೆಂದಗಿ ಬಗ್ಯಾಗಿ ಬರತಕ್ಕ 200 ರೂಪಾಯಿ ಸಾಲವನ್ನು ವಸೂಲ್ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್ಪ್ರಕಾರ ಸರಟಿಫಿಕೇಟ್ ಕೊಡಿಸಬೇಕೆಂದು ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತನ್ನು 1885ನೇ ಇಸವಿ ನವಂಬರ್ ತಿಂಗಳು 27ನೇ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಸೆ ಮಾಡಲ್ಪಡುತ್ತೆ: ಆ ಕಾಲದಲ್ಲಿ ಸದರೀ ಮುನಿಶಾಮಿ ಆಸ್ತಿಗೆ ಹಕ್ಕುದಾರರಾದ ವಿಷ್ಯರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ತಾರೀಖು 11ನೇ ಮಾಹೇ ನವಂಬರ್ 1885ನೇ ಇಸವಿ.

1885ನೇ ಇಸವಿ ಮಿಸಲೇನಿಯಸ್ ನಂಬರ್ 453.

ಮೃತಪಟ್ಟ ಚನ್ನೇಗೌಡ, ಮತ್ತು ಛಾತೀ ಚಲುವೇಗೌಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಕುಣಿಗಲ್ ತಾಲ್ಲೂಕು ಬೇಡರಹಳ್ಳಿಯಲ್ಲಿ ಇರುವ ನರಸೇಗೌಡನು, ಮೃತಪಟ್ಟ ಚನ್ನೇಗೌಡನು ತನಿಗೆ ತಂದೆಯೂಗಬೇಕು, ಮತ್ತು ಚಲುವೇಗೌಡನು ತನಿಗೆ ಅಂಣನಾಗಬೇಕೆಂಬ ಹಕ್ಕುದಾರಿ ಮೇಲೆ ಸದರೀ ವಾಸಸ್ಥರಾಗಿ ಮೃತಪಟ್ಟಚನ್ನೇಗೌಡನ ಜೆಂದಗೀ ಬಗ್ಯಾಗಿ ಬರತಕ್ಕ 200 ರೂಪಾಯಿಗಳು ಮತ್ತು ಛಾತೀ ಚಲುವೇಗೌಡನ ಜೆಂದಗೀಬಗ್ಯಾಗಿ ಬರತಕ್ಕ 100ರೂಪಾಯಿಗಳೂ ಸಹ ವಸ್ಸೂಲ್ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್ಪ್ರಕಾರ ಸರಟಿಫಿಕೇಟ್ ಕೊಡಿಸಿಕೊಡಬೇಕೆಂದು ಈ ಕೋರ್ಟ್‌ಗೆ ಅರ್ಜೀದಾರನು ಖಾಯಿಷ್ ಮಾಡುತ್ತಾನೆ.

ಸದರೀ ದರಖಾಸ್ತನ್ನು 1885ನೇ ಇಸವಿ ನವಂಬರ್ ತಾರೀಖು 30ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಸೆಮಾಡಲ್ಪಡುತ್ತೆ. ಆ ಕಾಲದಲ್ಲಿ ಮೃತಪಟ್ಟ ಚನ್ನೇಗೌಡ ಮತ್ತು ಚಲುವೇಗವುಡ ಇವರ ಆಸ್ತಿಗೆ ಹಕ್ಕುದಾರರಾದ ವಿಷ್ಯರೂ ಈ ಕೋರ್ಟ್‌ನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ತಾರೀಖು 14ನೇ ಮಾಹೇ ನವಂಬರ್ 1885ನೇ ಇಸವಿ ಮೊಕ್ಕಾಂ ಬೆಂಗಳೂರು.

1885ನೇ ಇಸವಿ ಮಿಸಲೇನಿಯಸ್ ನಂಬರ್ 474.

ಅರ್ಜೀದಾರ ಪಾವಗಡದ ತಾಲ್ಲೂಕು ಕಸಬಾ ಸಮ್ಮತ್ತು ಕಿಲಾರ್ಲಹಳ್ಳೀಯಲ್ಲಿ ಯಿರುವ ಛಾತೀ ಗೊರವೇಗೌಡನ ಪೆಂಜತಿ ಈರಮ್ಮ ಮೈನರ್ ಇವಳ ತಾಯಿ ಸಂಕಮ್ಮನ ಅರ್ಜೀ ವಿಷಯದಲ್ಲಿ—

ಸದರೀ ಮೈನರ್ ಈರಮ್ಮನೆಂಬುವಳು ತನ್ನ ಗಂಡ ಛಾತೀ ಗೊರವೇಗೌಡನ ಬಾಬತು 650—0—0 ರೂಪಾಯಿ ಕಿಮ್ಮತಿನ ಚರ ಸ್ಥಿರ ಸ್ವತ್ತುಗಳಿಗೆ ಮಾನೇಜರ್ ಸರಟಿಫಿಕೇಟ್ ಕೊಡಿಸಬೇಕೆಂದು ಸಂಕಮ್ಮ ಕೊಟ್ಟಿರತಕ್ಕ ಅರ್ಜಿಯು 1885ನೇ ಇಸವಿ ನವಂಬರ್ ತಿಂಗಳು 27ನೇ ತಾರೀಖಿನಲ್ಲಿ ವಿಮರ್ಸೆ ಮಾ[illegible] ಸದರೀ ಆಸ್ತಿಗೆ ಹಕ್ಕುದಾರರಾದ ವಿಷ್ಯರೂ ಆ ಕಾಲದಲ್ಲಿ ಈ ಕೋರ್ಟ್‌ನಲ್ಲಿ ಹಾಜರ್ ಯಿರಬೇಕೆಂತ[illegible]

ತಾರೀಖು 3ನೇ ಮಾಹೇ ನವ[illegible]

[illegible]8.

[illegible]ಯದಲ್ಲಿ—

ಅರ್ಜೀದಾರ್ ಬೆಂಗಳೂರು ತಿಗಳರ[illegible]ಟ್ಟ ಚಿಲ್ಲಘಟ್ಟಪ ಗೋವಿಂದಪ್ಪನು ತನಿಗೆ ಗಂಡನಾಗಬೇಕೆಂಬ ಹಕ್ಕುದಾರೀ ಮೇಲೆ ಸದರೀ [illegible] 650 ರೂಪಾಯಿ ಸಾಲವನ್ನು ವಸೂಲ್ ಮಾಡಿ-